# ಪ್ರಕೃತಿ ಉಪಾಸನೆ – ವೇದಮಂತ್ರಗಳು

**ಓಂ ನಮೋ ಬ್ರಹ್ಮಣೇ ನಮೋ ಅಸ್ತ್ವಗ್ನಯೇ ನಮಃ ಪೃಥಿವ್ಯೈ ನಮ ಓಷಧೀಭ್ಯಃ ।**
**ನಮೋ ವಾಚೇ ನಮೋ ವಾಚಸ್ಪತಯೇ ನಮೋ ವಿಷ್ಣವೇ ಬೃಹತೇ ಕರೋಮಿ ॥**

ಬ್ರಹ್ಮನಿಗೆ ನಮಸ್ಕಾರ. ಅಗ್ನಿಗೆ ನಮಸ್ಕಾರ. ಪೃಥಿವಿಗೆ ನಮಸ್ಕಾರ. ಸಸ್ಯವರ್ಗಕ್ಕೆ ನಮಸ್ಕಾರ. ವಾಕ್ಕಿಗೆ ನಮಸ್ಕಾರ. ವಾಗ್ದೇವಿಗೆ ನಮಸ್ಕಾರ. ಸರ್ವವ್ಯಾಪಿಯಾದ ವಿಷ್ಣುವಿಗೆ ನಮಸ್ಕಾರ.

**ಓಂ ದ್ಯೌಃ ಶಾಂತಿರಂತರಿಕ್ಷಃ ಶಾಂತಿಃ ಪೃಥಿವೀ ಶಾಂತಿರಾಪಃ ಶಾಂತಿರೋಷಧಯಃ ಶಾಂತಿಃ ।**
**ವನಸ್ಪತಯಃ ಶಾಂತಿರ್ವಿಶ್ವೇದೇವಾಃ ಶಾಂತಿರ್ಬ್ರಹ್ಮ ಶಾಂತಿಃ । ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ ॥**

ಊರ್ಧ್ವಲೋಕದಲ್ಲಿ, ಅಂತರಿಕ್ಷದಲ್ಲಿ, ಭೂಮಿಯಲ್ಲಿ, ಗಿಡ ಮರ ಬಳ್ಳಿಗಳಲ್ಲಿ, ದೇವತೆಗಳಲ್ಲಿ ಮತ್ತು ಬ್ರಹ್ಮದಲ್ಲಿ ಶಾಂತಿಯಿರಲಿ. ಎಲ್ಲೆಡೆಯಲ್ಲಿಯೂ ಶಾಂತಿಯಿರಲಿ ಮತ್ತು ಅಂತಹ ನಿಜವಾದ ಶಾಂತಿಯು ನಮ್ಮದಾಗಲಿ.

**ಓಂ ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ । ಮಾಧ್ವೀರ್ನಸ್ಸಂತ್ವೋಷಧೀಃ । ಮಧುನಕ್ತಮುತೋಷಸಿ ಮಧುಮತ್ ಪಾರ್ಥಿವಂ ರಜಃ । ಮಧುದ್ಯೌರಸ್ತು ನಃ ಪಿತಾ । ಮಧುಮಾನ್ನೋ ವನಸ್ಪತಿರ್ಮಧುಮಾನಸ್ತು ಸೂರ್ಯಃ। ಮಾಧ್ವೀರ್ಗಾವೋ ಭವಂತು ನಃ । ಓಂ ಮಧುಃ । ಓಂ ಮಧುಃ । ಓಂ ಮಧುಃ ॥**

ನಮಗೆ ಸುಖವುಂಟಾಗುವಂತೆ ಗಾಳಿಯು ಬೀಸಲಿ; ನದಿಗಳು ಮಧುರವಾದ, ಆರೋಗ್ಯಕರವಾದ ನೀರನ್ನು ಕೊಡಲಿ; ಸಸ್ಯಗಳು ಮಧುರವಾಗಿ ಪಥ್ಯರೂಪವಾಗಲಿ; ರಾತ್ರಿಹಗಲುಗಳು ಮಧುರವಾಗಿರಲಿ; ಭೂಮಿತಾಯಿಯ ಧೂಳಿಯು ಮಧುಕರವಾಗಿರಲಿ; ಪಿತನಾದ ಅಂತರಿಕ್ಷವು ಸುಖಕರನಾಗಲಿ; ವೃಕ್ಷಗಳು ಮಧುರವಾದ ಫಲಗಳನ್ನು ಕೊಡಲಿ; ಸೂರ್ಯನು ಹಿತಕರವಾಗಿ ಬೆಳಗಲಿ; ಗೋವುಗಳು ಅಮೃತಪ್ರಾಯವಾದ ಹಾಲನ್ನು ಕೊಡಲಿ.

## ಪರಿಸರ ಮತ್ತು ಸನಾತನ ಧರ್ಮ

**ಮ**ರಗಳನ್ನು ನಾಶ ಮಾಡದಿರಿ. ಏಕೆಂದರೆ ಅವು ಮಾಲಿನ್ಯವನ್ನು ತೊಡೆದುಹಾಕುತ್ತವೆ.
[*ಋಗ್ವೇದ ಸಂಹಿತಾ,* vi–48–17]

**ಸ**ಸ್ಯಗಳು ನಮ್ಮ ತಾಯಂದಿರು ಮತ್ತು ದೇವತೆಗಳು. [*ಋಗ್ವೇದ ಸಂಹಿತಾ,* x–97–4]

**ಪ**ವಿತ್ರವಾದ ಹುಲ್ಲುಗಳು ಮನುಷ್ಯರಿಂದ ನಾಶಗೊಳ್ಳುವುದನ್ನು ತಪ್ಪಿಸಬೇಕು.
[*ಋಗ್ವೇದ ಸಂಹಿತಾ,* vii–75–8]

**ಸ**ಸ್ಯಗಳು ಮತ್ತು ನೀರು ತಲೆಮಾರುಗಳ ಸಂಪತ್ತು. [*ಋಗ್ವೇದ ಸಂಹಿತಾ,* vii–70–4]

**ಆ**ಕಾಶದಲ್ಲಿ ಗಲಿಬಿಲಿಯುಂಟುಮಾಡದಿರಿ ಮತ್ತು ವಾಯುಮಂಡಲವನ್ನು ಮಲಿನಗೊಳಿಸದಿರಿ.
[*ಯಜುರ್ವೇದ,* 5:43]

**ನಾ**ವು ಚತುಷ್ಪಾದಿಗಳನ್ನು ಸಂರಕ್ಷಿಸಿಕೊಳ್ಳಬೇಕು. [*ತೈತ್ತಿರೀಯ ಸಂಹಿತಾ,* iv–4–10]

**ಕಾ**ಡುಗಳ ನಾಶವೆಂದರೆ ರಾಜ್ಯವೇ ನಾಶವಾದಂತೆ. ಕಾಡುಗಳನ್ನು ಬೆಳೆಸುವುದೆಂದರೆ ರಾಜ್ಯವನ್ನು ಕಟ್ಟಿ ಅದರ ಕಲ್ಯಾಣವನ್ನು ವರ್ಧಿಸುವುದೇ ಆಗಿದೆ. ಪ್ರಾಣಿಗಳನ್ನು ಸಂರಕ್ಷಿಸಿಕೊಳ್ಳುವುದು ಪರಮ ಪಾವನ ಕರ್ತವ್ಯವೇ ಆಗಿದೆ. [*ಚರಕ ಸಂಹಿತಾ*]

**ಪ್ರಾ**ಣಿಗಳಲ್ಲಿ ಯಾವ ದೋಷವನ್ನೂ ಹುಡುಕಬಾರದು. [*ಛಾಂದೋಗ್ಯ ಉಪನಿಷತ್,* ii–18–2]

**ಸಾ**ಗರ, ನದಿ ಮತ್ತಿತರ ಜಲಾಶಯಗಳು ಯಾವ ಭೂಮಿಯ ಮೇಲಿವೆಯೋ, ನಮಗೆ ಆಹಾರ ಒದಗಿಸುವ ಸಸ್ಯಸಂಪತ್ತು ಯಾವ ಭೂಮಿಯ ಮೇಲೆ ಮೈದಳೆದಿದೆಯೋ ಯಾವ ಭೂಮಿ ಚರಾಚರ ಗಳಿಗೆ ಆಶ್ರಯವಿತ್ತಿದೆಯೋ – ಆ ಭೂಮಿ ತನ್ನ ಎಲ್ಲಾ ಸತ್ಫಲಗಳನ್ನು ನಮಗೆ ದಯಪಾಲಿಸಲಿ. ಸಕಲ ಜೀವಿ ಗಳಿಗೆ ಜೀವರಸವಾಗಿರುವ ನೀರು ಯಾವ ಭೂಮಿಯ ಮೇಲೆ ಎಲ್ಲ ಕಡೆಗಳಿಂದಲೂ ಹಗಲು–ರಾತ್ರಿಯೆನ್ನದೇ ಅವಿರತವಾಗಿ ಹರಿದು ಬರುತ್ತಿದೆಯೋ, ಆ ಭೂಮಿ ನಮಗೆ ಹಲವು ಧಾರೆಗಳಲ್ಲಿ ಕ್ಷೀರವನ್ನೆರೆಯಲಿ ಮತ್ತು ನಮ್ಮ ಬದುಕು ನಳನಳಿಸುವಂತೆ ಮಾಡಲಿ. [*ಅಥರ್ವ ವೇದ–ಭೂಮಿ ಸೂಕ್ತ*]

(**ಸಂಗ್ರಹ :** ಶ್ರೀ ಎಚ್.ಎಲ್. ಸತೀಶ್)



 